# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮವಿ/ಪವಿ/ದೂರಶಿಕ್ಷಣ.ಪದವಿ/ಸಿ.ಆರ್1/2022-23/ಇ.29

ಕುಲಸಚಿವ (ಪರೀಕ್ಷಾಂಗ)ರ ಕಛೇರಿ,
ಮಂಗಳಗಂಗೋತ್ರಿ - 574 199.
ದಿನಾಂಕ: 23.12.2024

## ಪರೀಕ್ಷಾ ಪ್ರಕಟಣೆ

**ವಿಷಯ:** ದೂರಶಿಕ್ಷಣ ಸ್ನಾತಕ ಪದವಿ ಕಾರ್ಯಕ್ರಮಗಳ (ಬಿ.ಎ, ಬಿ.ಕಾಂ ಹಾಗೂ ಬಿ.ಬಿ.ಎಂ/ಬಿ.ಬಿ.ಎ) ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಕುರಿತು.

------

ಮಂಗಳೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಸ್ನಾತಕ ಪದವಿ ಕಾರ್ಯಕ್ರಮಗಳ (ಬಿ.ಎ. ಬಿ.ಕಾಂ ಹಾಗೂ ಬಿ.ಬಿ.ಎಂ/ಬಿ.ಬಿ.ಎ) ಪ್ರಥಮ, ದ್ವಿತೀಯ ಹಾಗೂ ಅಂತಿಮ ವರ್ಷದ ಪುನರಾವರ್ತಿತ ಪರೀಕ್ಷೆಗಳು ದಿನಾಂಕ 25.02.2025 ರಿಂದ ಪ್ರಾರಂಭಗೊಳ್ಳುವುದು.

**ಪರೀಕ್ಷಾ ಕೇಂದ್ರ** : ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

ಪರೀಕ್ಷೆಗೆ ಅರ್ಹರಾದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಡಿ.ಡಿ ಯಾ ಚಲನ್ ಮೂಲಕ ಪಾವತಿಸಿ ವಿಶ್ವವಿದ್ಯಾನಿಲಯ ಒದಗಿಸಿದ ಕಂಪ್ಯೂಟರೀಕೃತ ಅರ್ಜಿಗಳನ್ನು ಭರ್ತಿ ಮಾಡಿ ಈ ಕೆಳಗಿನ ವಿಳಾಸಕ್ಕೆ ದಿನಾಂಕ 07.02.2025 ರೊಳಗಾಗಿ ಅಂಚೆ ಅಥವಾ ಮುದ್ದಾಂ ತಲುಪಿಸುವಂತೆ ತಿಳಿಸಲಾಗಿದೆ.

ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

**ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:**

| | | |
|---|---|---|
| 1. | 20.01.2025 | : ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ) |
| 2. | 21.01.2025 ರಿಂದ 29.01.2025 | : ದಂಡಶುಲ್ಕ ದಿನವೊಂದಕ್ಕೆ ರೂ. 75/- ರಂತೆ |
| 3. | 30.01.2025 ರಿಂದ 07.02.2025ರ ವರೆಗೆ | : ದಂಡಶುಲ್ಕ ದಿನವೊಂದಕ್ಕೆ ರೂ. 150/- ರಂತೆ |

***ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು:***

| | |
|---|---|
| ಪೂರ್ಣ ಪರೀಕ್ಷೆಗೆ | : ರೂ. 1100.00 |
| ಅರ್ಜಿ ಶುಲ್ಕ | : ರೂ. 200.00 |
| ಅಂಕಪಟ್ಟಿ ಶುಲ್ಕ | : ರೂ. 500.00 |
| ಒಟ್ಟು ಶುಲ್ಕ | : ರೂ. 1800.00 |
| ವಿಷಯವೊಂದಕ್ಕೆ (ಪುನರಾವರ್ತಿತ ವಿದ್ಯಾರ್ಥಿಗಳು) | : ರೂ. 200.00 |

(ಒಟ್ಟು ಶುಲ್ಕ ರೂ. 1800/- ಮೀರಬಾರದು)

**ಸೂಚನೆ:** ಅಂತಿಮ ದಿನಾಂಕ 07.02.2025 ರ ನಂತರ ಶುಲ್ಕ ಪಾವತಿಸಿ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.

ದಕ್ಷಿಣ ಕನ್ನಡ / ಉಡುಪಿ/ ಕೊಡಗು ಜಿಲ್ಲೆಯ ವಿದ್ಯಾರ್ಥಿಗಳು ಈ ಕೆಳಕಂಡ ಬ್ಯಾಂಕ್ ಶಾಖೆಗಳಲ್ಲಿ ಪರೀಕ್ಷಾ ಅರ್ಜಿಯೊಂದಿಗಿರುವ ಚಲನ್ ಉಪಯೋಗಿಸಿ, ದೂರಶಿಕ್ಷಣ ನಿರ್ದೇಶನ ಕೇಂದ್ರ-06, ಪರೀಕ್ಷಾ ಶುಲ್ಕ ಈ ಲೆಕ್ಕ ಶೀರ್ಷಿಕೆಗೆ ಪರೀಕ್ಷಾ ಶುಲ್ಕವನ್ನು ಪಾವತಿಸುವುದು.

1. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳಗಂಗೋತ್ರಿ
2. ಬ್ಯಾಂಕ್ ಆಫ್ ಬರೋಡ, ಮಂಗಳಗಂಗೋತ್ರಿ

ಇತರೇ ಹೊರ ಜಿಲ್ಲೆಗಳ ವಿದ್ಯಾರ್ಥಿಗಳು ಡಿ.ಡಿ.ಯನ್ನು The Finance Officer, Mangalore University, Mangalagangotri ಇವರ ಹೆಸರಿಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಪಡೆದು ಪಾವತಿಸುವುದು. ಪರೀಕ್ಷಾ ಅರ್ಜಿಯಲ್ಲಿ ನೋಂದಣಿ ಸಂಖ್ಯೆ, ಪರೀಕ್ಷಾ ಕೇಂದ್ರದ ಹೆಸರು ಹಾಗೂ ಚಲನ್ ಮೇಲೆ ನೋಂದಣಿ ಸಂಖ್ಯೆಯನ್ನು ಬರೆದು ಚಲನಿನ ನಾಲ್ಕನೇ ಮೂಲ ಪ್ರತಿಯನ್ನು ಪರೀಕ್ಷಾ ಅರ್ಜಿಯೊಂದಿಗೆ ಲಗತ್ತಿಸುವುದು.

.......02

**ವಿದ್ಯಾರ್ಥಿಗಳು ಗಮನಿಸಬೇಕಾದ ಸೂಚನೆಗಳು**

01. ಪ್ರತಿಯೊಬ್ಬ ಅಭ್ಯರ್ಥಿಯೂ ಮೇಲೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.200/- ಅರ್ಜಿ ಶುಲ್ಕ ಮತ್ತು ರೂ. 500/- ಅಂಕಪಟ್ಟಿ ಶುಲ್ಕವನ್ನು ಪಾವತಿಮಾಡತಕ್ಕದ್ದು.
02. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು
03. ವಿದೇಶೀ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕದ ಮೂರು ಪಟ್ಟು ಶುಲ್ಕವನ್ನು ಪಾವತಿಮಾಡತಕ್ಕದ್ದು.
04. ಒಮ್ಮೆ ಪಾವತಿಸಿದ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣದಿಂದಲೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
05. ಕನ್ನಡ ಮಾಧ್ಯಮದಲ್ಲಿ ಉತ್ತರಿಸಬಯಸುವ ವಿದ್ಯಾರ್ಥಿಗಳು ಈ ಕೋರಿಕೆಯನ್ನು ಪರೀಕ್ಷಾ ಅರ್ಜಿಯಲ್ಲಿ ನಮೂದಿಸಬೇಕು.
06. ಪರೀಕ್ಷಾ ಪ್ರವೇಶ ಪತ್ರವನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ರವಾನಿಸಲಾಗುವುದಿಲ್ಲ. ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಎರಡು ದಿನ ಮುಂಚಿತವಾಗಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ(ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು) ತಮ್ಮ ಗುರುತಿನ ಕಾರ್ಡುಗಳನ್ನು ಹಾಜರುಪಡಿಸಿ ಪ್ರವೇಶ ಪತ್ರವನ್ನು ಪಡೆಯಬೇಕು. ಪರೀಕ್ಷೆಯು ನಡೆಯುತ್ತಿರುವ ಸಂದರ್ಭಗಳಲ್ಲಿ ವಿದ್ಯಾರ್ಥಿಯು ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಹೊಂದಿರಲೇಬೇಕು. ಇಲ್ಲವಾದರೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ.
07. ಪರೀಕ್ಷಾ ಅರ್ಜಿಯನ್ನು ಕಳುಹಿಸುವ ಮೊದಲು ಅರ್ಜಿಯ ಎಲ್ಲಾ ಅಂಕಣಗಳನ್ನು ಪೂರ್ಣವಾಗಿ/ಸರಿಯಾಗಿ ಭರ್ತಿ ಮಾಡಿದೆಯೇ ಎಂದು ಖಾತರಿಪಡಿಸಿಕೊಳ್ಳಬೇಕು. ಮೂಲ ಚಲನ್ ಪ್ರತಿಯನ್ನು ಅಡಕಗೊಳಿಸಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಂಡು ಕಳುಹಿಸಿಕೊಡಬೇಕು. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರಕ್ಕೂ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗೆ ಅರ್ಜಿಯ ಹಿಂದೆ ಮುದ್ರಿಸಿರುವ ವಿವರವನ್ನು ಪರಿಶೀಲಿಸಿಕೊಳ್ಳತಕ್ಕದ್ದು.
08 ಪರೀಕ್ಷಾ ಶುಲ್ಕದ ಹಣವನ್ನು ಚೆಕ್ಕುಗಳು, ಮನಿಯಾರ್ಡರ್ ಅಥವಾ ಬ್ಯಾಂಕ್ ಡ್ರಾಫ್ಟ್‌ಗಳ ಮೂಲಕ ಕಳುಹಿಸಿದರೆ ಅವುಗಳನ್ನು ಅಂಗೀಕರಿಸಲಾಗುವುದಿಲ್ಲ.
09. ವಿಶ್ವವಿದ್ಯಾನಿಲಯದ ಕಾನೂನು ಮತ್ತು ನಿಯಮ-ನಿಬಂಧನೆಗಳ ಪ್ರಕಾರ ಯಾವುದೇ ಅಭ್ಯರ್ಥಿ ಪರೀಕ್ಷೆ ತೆಗೆದುಕೊಳ್ಳಲು ಅನರ್ಹರಾಗಿದ್ದ ಪಕ್ಷದಲ್ಲಿ, ಕೇವಲ ಪರೀಕ್ಷಾ ಶುಲ್ಕ ಸಂದಾಯ ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಿದ ಮಾತ್ರಕ್ಕೆ ಆ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳುವ ಹಕ್ಕು ಇರುವುದಿಲ್ಲ. ಪರೀಕ್ಷಾ ಶುಲ್ಕ ಪಾವತಿಸದೇ ಪರೀಕ್ಷಾ ಕೇಂದ್ರದಲ್ಲಿ ತಪ್ಪು ಮಾಹಿತಿ ನೀಡಿ ಪರೀಕ್ಷೆ ಬರೆದರೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ ಹಾಗೂ ಅಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.
10. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಮತ್ತು ಇತರ ಮೀಸಲಾತಿ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳೂ ಸಹ ಈ ಮೇಲೆ ನಮೂದಿಸಿರುವ ಪರೀಕ್ಷಾ ಶುಲ್ಕವನ್ನು ಪೂರ್ಣವಾಗಿ ಪಾವತಿಸಬೇಕು.
11. ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರು ತಮ್ಮಲ್ಲಿ ಸ್ವೀಕೃತಿಯಾದಂತಹ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ/ಪುನರ್ ಪರಿಶೀಲಿಸಿ ವಿಶ್ವವಿದ್ಯಾನಿಲಯದ ಅಧಿಕೃತ ಪರೀಕ್ಷಾ ಗಣಕೀಕರಣ MuVarsity software ನಲ್ಲಿ ಕಡ್ಡಾಯವಾಗಿ ದಿನಾಂಕ 24.01.2025 ರ ಒಳಗಾಗಿ ಅಪ್‌ಲೋಡ್ ಮಾಡಿ ಕ್ರೋಢೀಕರಿಸಿದ ಅಭ್ಯರ್ಥನಾ ಪಟ್ಟಿಯನ್ನು ಈ ಕಛೇರಿಗೆ ದಿನಾಂಕ 27.01.2025 ರೊಳಗಾಗಿ ಕಳುಹಿಸಿಕೊಡತಕ್ಕದ್ದು.

12. ನಿರ್ದೇಶಕರು, ದೂರಶಿಕ್ಷಣ ಕೇಂದ್ರ ಇವರಿಗೆ ವಿ.ಸೂ: ಸ್ವೀಕೃತಿಯಾದಂತಹ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ/ಪುನರ್ ಪರಿಶೀಲಿಸಿ ವಿಶ್ವವಿದ್ಯಾನಿಲಯದ ಪರೀಕ್ಷಾ ಗಣಕೀಕರಣ ಸಂಬಂಧಿತ **MuVarsity ಸಾಫ್ಟ್‌ವೇರ್ ನಲ್ಲಿ** ಕಡ್ಡಾಯವಾಗಿ Online ಮೂಲಕ ವಿವರಗಳನ್ನು ಅಪ್‌ಲೋಡ್ ಮಾಡತಕ್ಕದ್ದು **ಮತ್ತು ಪರೀಕ್ಷಾ ಕೇಂದ್ರವು ATS ನ್ನು ಪಡೆಯಲು** MuVarsity software **ನಲ್ಲಿ ಪರೀಕ್ಷಾ ಕೇಂದ್ರವನ್ನು ನಮೂದಿಸುವುದು.**

(ಸಹಿ)
ಕುಲಸಚಿವರು (ಪರೀಕ್ಷಾಂಗ)

ರಿಗೆ:

ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ. 574 199

ಪ್ರತಿ:,

1. ಕುಲಸಚಿವರು/ಹಣಕಾಸು ಅಧಿಕಾರಿಯವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಮಾನ್ಯ ಕುಲಪತಿಯವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.
3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ವಲಯ.
4. ಅಧೀಕ್ಷಕರು ಎಸ್.1, ಎಸ್.2, ಎಸ್.3, ಎಸ್.4, ಕುಲಸಚಿವರು (ಪರೀಕ್ಷಾಂಗ)ರ ಕಛೇರಿ.
5. ಸಿಸ್ಟಂ ಅನಾಲಿಸ್ಟ್ ಆ್ಯಂಡ್ ಪ್ರೋಗ್ರಾಮರ್, ಕುಲಸಚಿವರು (ಪರೀಕ್ಷಾಂಗ)ರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ.
6. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7. ಇ.9/ಇ.10/ಇ.11/ ಕಾರ್ಯನಿರ್ವಾಹಕರು